# 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು

---

ಅಸಲು ದಾವಾ ಸಂಖ್ಯೆ: 178/2013

ಡಿ ಡಬ್ಲ್ಯೂ ನಂ: 2

---

**<u>ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕ: 16.04.2026</u>**

**<u>ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಆರ್ ರವರಿಂದ</u>**

ಈ ದಾವೆಯಲ್ಲಿ ನಾನು ಸಾಕ್ಷಿದಾರನಿದ್ದು, ನನ್ನ ಪ್ರಾಮಾಣೀಕೃತ ಹೇಳಿಕೆಯನ್ನು ಈ ದಿನ ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ ಮತ್ತು ಅದರಲ್ಲಿ ಹೇಳಿರುವುದೆಲ್ಲಾ ಸತ್ಯವಿದೆ ಎಂದು ಪ್ರಮಾಣೀಕರಿಸುತ್ತೇನೆ. ಹಾಗೂ ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಾನು ನಿಡಿ –11 ಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಡಿ –11 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಡಿ–11ಎ ಎಂದು ಗುರುತಿಸಲಾಯಿತು. ನಿಡಿ–11 ಕ್ಕೆ ಶಂಕರಶೆಟ್ಟಿ ಎಂಬುವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಆ ಕಾರಣಕ್ಕೆ ಅವರ ಸಹಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ನಿಡಿ–11 ರಲ್ಲಿರುವ ಸಾಕ್ಷಿದಾರರಾದ ಶಂಕರಶೆಟ್ಟಿರವರ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಡಿ–11ಬಿ ಎಂದು ಗುರುತಿಸಲಾಯಿತು. ನಿಡಿ–11 ಕ್ಕೆ ಸಿದ್ದಮ್ಮನವರು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಸದರಿಯವರು ನನ್ನ ಸಮಕ್ಷಮ ಹೆಬ್ಬೆಟ್ಟಿನ ಗುರುತು ಹಾಕಿದ್ದರಿಂದ ಅವರ ಹೆಬ್ಬೆಟ್ಟಿನ ಗುರುತನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಯು ನಿಡಿ–11 ರಲ್ಲಿರುವ ಸಿದ್ದಮ್ಮನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ.

(ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**